

# ನಾಟಿಕೋಳಿಯ ರುಚಿ





ಚಿತ್ರ– ಲೇಖನ:
**ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ.**

ನಾಟಿಕೋಳಿ ಸಾರಿನ ಜೊತೆ ಅಕ್ಕಿರೊಟ್ಟಿ, ಮುದ್ದೆ ಮತ್ತು ಅಕ್ಕಿ ಶ್ಯಾವಿಗೆ (ನೂಡಲ್ಸ್) ಒಳ್ಳೆಯ ಕಾಂಬಿನೇಷನ್. ಕೋಳಿ ಅಂಗಡಿಗಳಲ್ಲಿ ಕೃತಕ ಆಹಾರಗಳನ್ನು ತಿಂದು ಬೆಳೆದಿರುವ ನಾಟಿಕೋಳಿಗಳೂ ಇವೆ. ಆದರೆ ಹಳ್ಳಿಯ ಬಯಲಿನಲ್ಲಿ ನಾಟಿ ಆಹಾರವನ್ನು ತಿಂದು ಬೆಳೆಯುವ ನಾಟಿಕೋಳಿಗಳ ಸಾರು ರುಚಿಯೇ ಬೇರೆ.

ಕೋಳಿಗಳನ್ನು ಕಾವಿಗೆ ಕೂರಿಸಲು ಮಂಕರಿಗೆ ಭತ್ತದ ಹುಲ್ಲು, ಮರಳು, ಒಲೆಯ ಬೂದಿ, ಕಬ್ಬಿಣದ ತುಂಡು, ಉಪ್ಪು ಮೆಣಸಿನಕಾಯಿ ಹಾಕಿ ನಂತರ ಮೊಟ್ಟೆಗಳನ್ನು ಲಂಬವಾಗಿ ಬೂದಿಯಲ್ಲಿ ಹೂಳಬೇಕು. ನಂತರ ಕೋಳಿಯನ್ನು ಬಿಟ್ಟರೆ ಅದು ತಾನಾಗಿಯೇ ಕುಳಿತುಕೊಳ್ಳುತ್ತದೆ. ಕಾವಿಗೆ ಹೆಚ್ಚು ಮೊಟ್ಟೆಗಳನ್ನು ಇಟ್ಟರೆ ಮೊಟ್ಟೆಗಳು ಅಗಲವಾಗಿ ಅಷ್ಟು ಮೊಟ್ಟೆಗೆ ಕೋಳಿಯಿಂದ ಶಾಖ ಕೊಡಲು ಸಾಕಾಗದೆ ಮೊಟ್ಟೆಯನ್ನು ಕೆಡಿಸುತ್ತದೆ. ಆದ್ದರಿಂದ 10ರಿಂದ 12 ಮೊಟ್ಟೆಗಳು ಮಾತ್ರ ಕಾವಿಗೆ ಸೂಕ್ತ.

ಕಾವಿಗೆ ಕೂರಿಸಿದ 20 ದಿನಗಳಾದ ನಂತರ ಒಂದೊಂದೇ ಮರಿ ಮೊಟ್ಟೆಯಿಂದ ಹೊರಬರಲು ಪ್ರಾರಂಭಿಸುತ್ತದೆ. 21ನೇ ದಿನಕ್ಕೆ ಕಾವಿನಿಂದ ಕೆಳಗಿಳಿಯುತ್ತದೆ. ಆಗಲೂ ಒಡೆಯದೆ ಇರುವ ಮೊಟ್ಟೆಗಳು ಕೆಟ್ಟಿವೆ ಎಂದರ್ಥ.

ಯಾವ ಮೊಟ್ಟೆಯಿಂದ ಹುಂಜ ಮತ್ತು ಹೆಂಟೆ ಹೊರಬರುತ್ತದೆಂದು ಪತ್ತೆ ಹಚ್ಚುವುದು ಸ್ಕ್ಯಾನಿಂಗ್‌ನಿಂದಲೂ ಕಷ್ಟ. ಕಾವಿಗೆ ಕೂತಾಗ ಕೋಳಿ ಆಹಾರಕ್ಕೆಂದು ಎರಡು ಅಥವಾ ಮೂರು ದಿನಕ್ಕೊಮ್ಮೆ ಕೆಳಗಿಳಿಯುತ್ತದೆ. ಆಗ ಅದಕ್ಕೆ ಸೂಕ್ತ ಆಹಾರವನ್ನು ಕೊಡುವುದು ಒಳ್ಳೆಯದು. ಕೋಳಿಯು ಮೊಟ್ಟೆಯಿಡುವ ಸಮಯದಲ್ಲಿ ಶೇಖರವಾದ ಕೊಬ್ಬನ್ನು ಕಾವಿಗೆ ಕೂತಾಗ ದೇಹವು ಬಳಸಿಕೊಳ್ಳುತ್ತದೆ. ಆದ್ದರಿಂದಲೇ ಮೊಟ್ಟೆ ಹೆಂಟೆಯ ಸಾರು ರುಚಿಯಾಗಿರುವುದು. ಕೋಳಿಯನ್ನು ಮಳೆಗಾಲದಲ್ಲಿ ಕಾವಿಗೆ ಕೂರಿಸುವುದು ಒಳ್ಳೆಯದಲ್ಲ. ಗುಡುಗು, ಸಿಡಿಲಿಗೆ ಕೋಳಿ ಮೊಟ್ಟೆಯನ್ನು ಕೆಡಿಸುತ್ತದೆ.

ಕಾವಿನಿಂದ ಇಳಿದ ಮರಿಕೋಳಿ 2 ತಿಂಗಳಿಗೆ ತಾಯಿಕೋಳಿಯಿಂದ ಬೇರ್ಪಟ್ಟು, 6 ತಿಂಗಳಿಗೇ ಮೊಟ್ಟೆಯಿಡಲು ಪ್ರಾರಂಭಿಸುತ್ತವೆ. ಕಾವಿನಿಂದ ಇಳಿದ ತಾಯಿಕೋಳಿ ಮತ್ತೆ 3 ತಿಂಗಳಿಗೆ ಮೊಟ್ಟೆಯಿಡಲು ಆರಂಭಿಸುತ್ತದೆ. ಮೊಟ್ಟೆಯಿಟ್ಟ ಕೋಳಿಯನ್ನು ನೀವು ಕಾವಿಗೆ ಕೂರಿಸದಿದ್ದರೆ ಅದು 15 ದಿನಗಳ ತರುವಾಯ ಮೊಟ್ಟೆಯಿಡಲು ಪ್ರಾರಂಭಿಸುತ್ತದೆ. ಒಮ್ಮೆಗೆ ಕೋಳಿ 20ರಿಂದ 25 ಮೊಟ್ಟೆಗಳನ್ನು ಇಡುತ್ತದೆ.

ಕೋಳಿಯು ತನ್ನ ಮರಿಗಳಿಗೆ ಜೀವನಪಾಠವನ್ನು ಒಂದೊಂದಾಗಿ ಹೇಳಿಕೊಡುತ್ತದೆ. ಇದರಲ್ಲಿ ಮೊದಲನೆಯದು ಹದ್ದು, ಕಾಗೆ, ಮುಂಗಸಿಗಳಿಂದ ರಕ್ಷಿಸಿಕೊಳ್ಳುವುದು. ತಾಯಿ ಕೋಳಿಯ ಕೂಗು ಅಪಾಯದ ಮುನ್ಸೂಚನೆಯನ್ನು ಮಾಲೀಕರಿಗೆ ಮತ್ತು ಮರಿಗಳಿಗೆ ಸೂಚಿಸುತ್ತದೆ. ಮರಿಗಳ ರಕ್ಷಣೆಗೆಂದು ಹದ್ದು/ಕಾಗೆ ಜೊತೆಗೆ ಹೋರಾಟಕ್ಕಿಳಿದು ಅದರ ಜೊತೆ ಐದಾರು ಅಡಿಗಳಷ್ಟು ಎತ್ತರಕ್ಕೆ ಹಾರುವುದೂ ಇದೆ.

ವಠಾರದಲ್ಲಿ ಒಂದೇ ಒಂದು ಹುಂಜವಿದ್ದರೂ ಸಾಕು, ಎಲ್ಲಾ ಹೆಂಟೆಗಳೂ ಮೊಟ್ಟೆ ಇಡುವಂತೆ ಮಾಡುತ್ತದೆ. ನಾಟಿಕೋಳಿ ಮಾಂಸ ಮಾತ್ರವಲ್ಲ, ಮೊಟ್ಟೆಯೂ  ಬಲು ರುಚಿಕರ ಮತ್ತು ಪ್ರೊಟೀನ್‌ಯುಕ್ತ. ಮನುಷ್ಯರಿಗೆ ಅಪಘಾತವಾಗಿ ಕೈಕಾಲು ಮುರಿದರೆ ನಾಟಿಕೋಳಿ ಮೊಟ್ಟೆಯನ್ನು ಕುಡಿಯಲು ಕೊಡುವುದಿದೆ. ದನಗಳಿಗೂ ಕೂಡಾ!